**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ. 21-09-2019**

**ಪಾಟೀ ಸವಾಲು – 1ನೇ ಪ್ರತಿವಾದಿ ಪರ ವಕೀಲರಿಂದ**

ನಾನು ವಿದ್ಯಾಭ್ಯಾಸ ಮಾಡಿರುವುದಿಲ್ಲ. ನಾನು ವ್ಯವಸಾಯ ಮಾಡುತ್ತೇನೆ. ಪ್ರ2ವಾದಿಗಳು ನಮಗೆ ಕೇಸು ಹಾಕುವ ಏಳು ದಿವಸದ ಹಿಂದೆ ತೊಂದರೆ ಕೊಟ್ಟ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇನೆ. 1ನೇ ಪ್ರತಿವಾದಿ ಸಲ್ಲಿಸಿರುವ ತಕರಾರಿನಲ್ಲಿ ಏನು ಇದೆ ಎಂದು ನಾನು ತಿಳಿದುಕೊಂಡಿರುವುದಿಲ್ಲ. ದಾವೆ ಈ ರೀತಿ ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾವೇ ಕೊಟ್ಟಿರುತ್ತೇವೆ. ನನ್ನ ಪ್ರಮಾಣ ಪತ್ರಿಕೆಯಲ್ಲಿರುವ ವಿಚಾರಗಳನ್ನು ತಿಳಿದುಕೊಂಡಿರುತ್ತೇನೆ. ನಮ್ಮ ತಂದೆಗೆ ನಾನು ಒಬ್ಬನೇ ಗಂಡುಮಗ ಎಂದರೆ ಸರಿ. ನಮ್ಮ ಕುಟುಂಬದ ವ್ಯವಹಾರಗಳನ್ನು ಗಂಡುಮಗನಾದ ಕಾರಣ ನಾನೇ ನೋಡಿಕೊಳ್ಳುತ್ತಿದ್ದೆ ಎಂದರ ಸರಿ. ನ್ಯಾಯಾಲಯಕ್ಕೆ ಹಾಜರು ಪಡಿಸಿರುವ ದಾಖಲಾತಿಗಳನ್ನು ತಾಲ್ಲೂಕು ಕಛೇರಿಯಿಂದ ನಾನೇ ಪಡೆದುಕೊಂಡಿರುತ್ತೇನೆ. ದಾವಾ ಆಸ್ತಿ ನಿಪಿ.2 ರ ಪ್ರಕಾರ ರಾಮಯ್ಯನ ಹೆಸರಿನಲ್ಲಿದೆ ಎಂ ದರೆ ಸರಿ. ದಾವಾ ಆಸ್ತಿ ರಾಮಯ್ಯನಿಗೆ ವಿಭಾಗದಲ್ಲಿ ಬಂದಿರುತ್ತದೆ. ವಿಭಾಗದಲ್ಲಿ ನನ್ನ ತಂದೆಗೆ ಒಟ್ಟು ಮೂರು ಆಸ್ತಿಗಳು ಬಂದಿರುತ್ತದೆ. ವಿಭಾಗಕ್ಕೆ ಮೊದಲು ಆಸ್ತಿಗಳು ಚಿಕ್ಕಕಾಕಪ್ಪನ ಹೆಸರಿನಲ್ಲಿತ್ತು. ನನ್ನ ತಾತ ಚಿಕ್ಕಕಾಕಪ್ಪನಿಗೆ ಒಟ್ಟು ನಾಲ್ಕು ಜನ ಮಕ್ಕಳು. ಅವರೆಂದರೆ ಮುನಿವೆಂಕಟಪ್ಪ, ಪಿಳ್ಳಪ್ಪ, ಲಕ್ಷ್ಮಯ್ಯ ಮತ್ತು ರಾಮಯ್ಯ.

2) ನನ್ನ ತಂದೆ ರಾಮಯ್ಯನಿಗೆ ವಿಭಾಗದಲ್ಲಿ ಸರ್ವೆ ನಂ.36 ರಲ್ಲಿ 15 ಗುಂಟೆ ಬಂದಿದ್ದು ಅದು ಗೊಬ್ಬರಗುಂಟೆ ಗ್ರಾಮಕ್ಕೆ ಸೇರಿರುತ್ತದೆ. ಸರ್ವೆ ನಂ.35 ರಲ್ಲಿ 15 ಗುಂಟೆ ಬಂದಿರುತ್ತದೆ. ಸರ್ವೆ ನಂ.60/3 ರಲ್ಲಿ 1 ಎಕರೆ 17 ಗುಂಟೆ ಬಂದಿರುತ್ತದೆ. ವಿಭಾಗ

ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಮಾಡಿರುತ್ತೇನೆ. ಈ ದಾವೆಯನ್ನು ಸರ್ವೆ ನಂ.60/3 ರ 1 ಎಕರೆ 17 ಗುಂಟೆ ಸಂಬಂಧ ಹಾಕಿರುತ್ತೇನೆ.

**(**ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ವಕೀಲರು ಕಾಲಾವಕಾಶ ಕೋರಿದ್ದರಿಂದ, ಕಾಲಾವಕಾಶ ನೀಡಲಾಯಿತು**).**

**(**ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**).**

**ಓ.ಹೇ.ಕೇ.ಸ.ಇ.ಎ. ಒಪ್ಪಿಕೊಂಡಿದ್ದಾರೆ,**

**ಸೀನಿಯರ್ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ದೇವನಹಳ್ಳಿ.**